ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿರವರ ಕಚೇರಿ
ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು
ತುರ್ತು ಸೇವೆಗಳು,
ಬೆಂಗಳೂರು ಪಶ್ಚಿಮ ವಲಯ,
ರಾಜಾಜಿನಗರ, ಬೆಂಗಳೂರು-10.

ದೂರವಾಣಿ ಸಂಖ್ಯೆ: 080-22971578

ಸಂಖ್ಯೆ: 482/CC/ಪ್ರಾಅಅ/ಬೆಂಪವ/2026

ದಿನಾಂಕ: 13-07-2026

ಗೆ,

**The Authorized Signatory,**
**M/s. NATIONAL PUBLIC SCHOOL-SMV,**
**CA No. 08, 3rd Block,**
**Sir M. Vishweshwaraiah Layout,**
**Sonnenahalli, Ullal,**
**Bengaluru-560110.**

ಮಾನ್ಯರೆ,

ವಿಷಯ: **M/s. NATIONAL PUBLIC SCHOOL-SMV**, CA No. 08, 3rd Block, Sir M. Vishweshwaraiah Layout, Sonnenahalli, Ullal, Bengaluru-560110 ಇಲ್ಲಿ ನಿರ್ಮಿಸಿರುವ ಶಾಲಾ ಕಟ್ಟಡಕ್ಕೆ **"ಸಮಾಪನ ಪತ್ರ"** (**Compliance Certificate**) ನೀಡುವ ಬಗ್ಗೆ.

ಉಲ್ಲೇಖ: 1) ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಅಗ್ನಿ ಸಲಹಾ ಪತ್ರ ಸಂ. 482/FSR/RFO/BWR/2026 ದಿನಾಂಕ: 08-07-2026.

2) ನಿಮ್ಮ ಕೋರಿಕೆ ಪತ್ರ ದಿನಾಂಕ: 09-07-2026.

<<<<<>>>>>>>

**M/s. NATIONAL PUBLIC SCHOOL-SMV**, CA No. 08, 3rd Block, Sir M. Vishweshwaraiah Layout, Sonnenahalli, Ullal, Bengaluru-560110 ಇಲ್ಲಿ ನಿರ್ಮಿಸಿರುವ 19.50 **ಮೀಟರ್** ಎತ್ತರದ ನೆಲಹಂತ ಮತ್ತು 04 ಮೇಲಂತಸ್ತುಗಳನ್ನು ಹೊಂದಿರುವ **M/s. NATIONAL PUBLIC SCHOOL-SMV** ಶಾಲಾ ಕಟ್ಟಡಕ್ಕೆ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯಿಂದ ದಿನಾಂಕ: 08-07-2026 ರಂದು ನಿಮ್ಮ ಕೋರಿಕೆಯಂತೆ ಅಗ್ನಿ ಸಲಹಾ ಪತ್ರ (**Fire Advisory Certificate**) ನೀಡಲಾಗಿದೆ.

Office of the Regional Fire Officer, Bengaluru West Range, Blr-10. Date 13/07/2026



Scanned with OKEN Scanner

ಉಲ್ಲೇಖ (2) ರ ನಿಮ್ಮ ಪತ್ರದಲ್ಲಿ ಸದರಿ ಶಾಲಾ ಕಟ್ಟಡದಲ್ಲಿ ಅಗ್ನಿಶಮನ ಉಪಕರಣಗಳ ಅಳವಡಿಕೆ ಕಾರ್ಯ ಮುಗಿದಿದ್ದು, ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಸಮಾಪನ ಪತ್ರ (Compliance Certificate) ನೀಡುವಂತೆ ಕೋರಿರುತ್ತೀರಿ.

ನಿಮ್ಮ ಕೋರಿಕೆಯಂತೆ, **ಜಿಲ್ಲಾ ಅಗ್ನಿಶಾಮಕ ಅಧಿಕಾರಿ, ರಾಜಾಜಿನಗರ ಅಗ್ನಿಶಾಮಕ ಠಾಣೆ, ಬೆಂಗಳೂರು** ರವರು ದಿನಾಂಕ: 10-07-2026 ರಂದು CA No. 08, 3rd Block, Sir M. Vishweshwaraiah Layout, Sonnenahalli, Ullal, Bengaluru-560110 ಇಲ್ಲಿ ನಿರ್ಮಿಸಿರುವ ಶಾಲಾ ಕಟ್ಟಡವನ್ನು ಪರಿಶೀಲನೆ ಮಾಡಿ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯು ನೀಡಿರುವ ಸಲಹಾ ಪತ್ರದಂತೆ, ಅಗ್ನಿ ರಕ್ಷಣೆ ಮತ್ತು ನಿಯಂತ್ರಣ, ಅಗ್ನಿನಂದಿಸುವ ಉಪಕರಣಗಳ ಅಳವಡಿಕೆ ಹಾಗೂ ರಕ್ಷಣಾ ಕ್ರಮಗಳನ್ನು ಶಾಲಾ ಕಟ್ಟಡದಲ್ಲಿ ಪೂರ್ಣವಾಗಿ ಅನುಷ್ಠಾನಗೊಳಿಸಿರುವುದಾಗಿ ತಿಳಿಸಿರುತ್ತಾರೆ.

ಆದ್ದರಿಂದ CA No. 08, 3rd Block, Sir M. Vishweshwaraiah Layout, Sonnenahalli, Ullal, Bengaluru-560110 ಇಲ್ಲಿ ನಿರ್ಮಿಸಿರುವ 19.50 ಮೀಟರ್ ಎತ್ತರದ ನೆಲಹಂತ ಮತ್ತು 04 ಮೇಲಂತಸ್ತುಗಳನ್ನು ಮಾತ್ರ ಹೊಂದಿರುವ **M/s. NATIONAL PUBLIC SCHOOL-SMV** ಶಾಲಾ ಕಟ್ಟಡಕ್ಕೆ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಸಲಹಾ ಪತ್ರ ಸಂಖ್ಯೆ: 482/FSR/RFO/BWR/2026 ದಿನಾಂಕ: 08-07-2026 ರಲ್ಲಿ ತಿಳಿಸಿರುವಂತೆ ಅಗ್ನಿರಕ್ಷಣೆ ಮತ್ತು ನಿಯಂತ್ರಣ ಹಾಗೂ ಅಗ್ನಿನಂದಿಸುವ ಉಪಕರಣಗಳ ಅಳವಡಿಕೆ ಹಾಗೂ ರಕ್ಷಣಾ ಕ್ರಮಗಳನ್ನು ಕಟ್ಟು ನಿಟ್ಟಾಗಿ ಪಾಲಿಸಬೇಕೆಂದು ಮತ್ತು ಅಗ್ನಿಶಮನ ಉಪಕರಣಗಳನ್ನು ಸುಸ್ಥಿತಿಯಲ್ಲಿಡಬೇಕೆಂಬ ಷರತ್ತಿನ ಮೇಲೆ ಸಮಾಪನ ವರದಿ ಪ್ರಮಾಣ ಪತ್ರವನ್ನು ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯಿಂದ ನೀಡಲಾಗಿದೆ.

**ಈ ಸಮಾಪನ ಪ್ರಮಾಣ ಪತ್ರವು (Compliance Certificate) ದಿನಾಂಕ: 07-07-2028 ರವರೆಗೆ ಚಾಲ್ತಿಯಲ್ಲಿರುತ್ತದೆ, ತದನಂತರ ಈ ಸಮಾಪನ ಪ್ರಮಾಣ ಪತ್ರವನ್ನು ನವೀಕರಿಸುವಂತೆ ತಿಳಿಸಲಾಗಿದೆ.**

ಹಾಗೆಯೇ ಒಂದು ವೇಳೆ ಯಾವುದೇ ಸಂದರ್ಭದಲ್ಲಿ ಇಲಾಖೆಯ ಶಿಫಾರಸ್ಸಿನನ್ವಯ ಅಳವಡಿಸಿರುವ ಅಗ್ನಿ ನಿವಾರಣೆ ಹಾಗೂ ಅಗ್ನಿಶಮನ ಉಪಕರಣಗಳು ಸುಸ್ಥಿತಿಯಲ್ಲಿರದೇ ಇರುವುದು ಕಂಡು ಬಂದರೆ ಅಥವಾ ರಕ್ಷಣಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸದಿದ್ದರೆ ಅಥವಾ ಹಾಲಿ ಇರುವ ಕಟ್ಟಡವನ್ನು ಹೊರತುಪಡಿಸಿ ಹೆಚ್ಚುವರಿ ಖಾಯಂ/ತಾತ್ಕಾಲಿಕ ಮೇಲಂತಸ್ತುಗಳನ್ನು ನಿರ್ಮಿಸಿದರೆ ಈ **'ಸಮಾಪನ ಪ್ರಮಾಣ ಪತ್ರವು ಅನೂರ್ಜಿತಗೊಳ್ಳುವುದು'** ಹಾಗೂ ಕಾನೂನಿನ ಚೌಕಟ್ಟಿನಲ್ಲಿ ಮುಂದಿನ ಕ್ರಮಕೈಗೊಳ್ಳಲಾಗುವುದು ಎಂಬುದಾಗಿ ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ

13/7/2026

ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ
ಬೆಂಗಳೂರು ಪಶ್ಚಿಮ ವಲಯ
ರಾಜಾಜಿನಗರ, ಬೆಂಗಳೂರು-10.



Scanned with OKEN Scanner